Ex.No. 8/2018
ಡಿ.ಡಬ್ಲ್ಯು-01 – ಮಹದೇವಪ್ಪ

**ಸಾಕ್ಷಿಯನ್ನು ದಿನಾಂಕಃ 07.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಡಿಕ್ರಿದಾರರ ಪರ ಶ್ರೀ. ಬಿ.ಎಲ್.ಟಿ. ವಕೀಲರಿಂದಃ**

ಡಿಕ್ರಿದಾರರ ಆಸ್ತಿ ನನ್ನ ಆಸ್ತಿ ನನ್ನ ಆಸ್ತಿಯ ಪಶ್ಚಿಮಕ್ಕೆ ಇರುತ್ತದೆ. ನನ್ನ ಮನೆ ಜಮೀನಿನಲ್ಲಿಯೇ ಇರುತ್ತದೆಂದರೆ ಸರಿ. ಡಿಕ್ರಿದಾರರು ಮನೆಯನ್ನು ಕಟ್ಟುವಾಗ ಅವರ ಮನೆಯ ಪೂರ್ವಕ್ಕೆ 04 ಅಡಿ ಜಾಗ ಬಿಟ್ಟು ಮನೆ ಕಟ್ಟಿರುತ್ತಾರೆಂದರೆ ಸರಿಯಲ್ಲ. ಡಿಕ್ರಿದಾರರ ಮನೆಯ ಪೂರ್ವಕ್ಕೆ ರಸ್ತೆಯ ಬದಿ ಡಿಕ್ರಿದಾರರೇ ತೆಂಗಿನ ಮರಗಳನ್ನು ನೆಟ್ಟಿರುತ್ತಾರೆಂದರೆ ಸರಿಯಲ್ಲ. ನಿ.ಡಿ.–1 ಮತ್ತು ನಿ.ಡಿ.–2 ರಲ್ಲಿ ಕಾಣಿಸಿರುವ ತೆಂಗಿನ ಮರಗಳು ನನಗೆ ಸೇರಿದ ತೆಂಗಿನ ಮರಗಳಾಗಿರುತ್ತವೆ. ನಿ.ಡಿ.–1 ರಲ್ಲಿ ಕಾಣಿಸಿರುವ ಎರಡೂ ತೆಂಗಿನ ಮರಗಳು ನನಗೆ ಸೇರಿದ ತೆಂಗಿನ ಮರಗಳಾಗಿರುತ್ತವೆ. ನಿ.ಡಿ.–1 ರಲ್ಲಿ ಕಾಣಿಸಿರುವ ಮುಂದುಗಡೆ ಇರುವ ತೆಂಗಿನ ಮರದ ಜಾಗ ಸೇರಿ ಡಿಕ್ರಿದಾರರಿಗೆ ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ತೆಂಗಿನ ಮರ ಇರುವ ಜಾಗ ನನಗೆ ಸೇರಿರುತ್ತದೆಂದು ನುಡಿಯುತ್ತಾರೆ. ದಿನಾಂಕಃ 16.01.2021 ರಂದು ನನ್ನ ಜಾಗವನ್ನು ಅಳತೆ ಮಾಡಿಸಿರುತ್ತೇನೆಂದರೆ ಸರಿ. ಸಾಕ್ಷಿಗೆ 03 ದಾಖಲೆಗಳನ್ನು ತೋರಿಸಿ ಸದರಿ ಸರ್ವೆ ಸಂಬಂಧ ಹೊರಡಿಸಿದ ನೋಟೀಸ್, ಮಹಜರ್ ಹಾಗು ನಕಾಶೆ ಇದೇ ಅಲ್ಲವೇ ಎಂದು ಕೇಳಲಾಗಿ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ನೋಟೀಸ್, ಮಹಜರ್ ಹಾಗು ನಕಾಶೆಯ ಧೃಡೀಕೃತ ನಕಲುಗಳನ್ನು ಡಿಕ್ರಿದಾರರ ಪರ **ನಿ.ಪಿ.–2 ರಿಂದ ನಿ.ಪಿ.–4** ಎಂದು ಗುರುತಿಸಲಾಯಿತು. ನನ್ನ ಮುಖ್ಯ ವಿಚಾರಣೆಯ ಕಂಡಿಕೆ–2 ರಲ್ಲಿ ನಾನು ಹಾಗು ಡಿಕ್ರಿದಾರರು ತಲಾ ಅರ್ಧ ಅಡಿ ಜಾಗ ಬಿಟ್ಟಿರುವ ಬಗ್ಗೆ ತಿಳಿಸಿದ್ದು, ಸದರಿ ವಿಚಾರವನ್ನು ನಾನು ಇದೇ ಮೊದಲ ಬಾರಿಗೆ ತಿಳಿಸುತ್ತಿದ್ದೇನೆಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ಹಿಂದೆ ಅಸಲು ದಾವೆ ಸಂಖ್ಯೆ 19/2021ರ ಪ್ರತಿವಾದ ಪತ್ರ ಅಥವಾ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿ.ಡಿ.–1 ರಲ್ಲಿ ಕಾಣಿಸುವ ಮನೆಗಳ ಮುಂದೆ ಇರುವ ತೆಂಗಿನ ಮರ ನನಗೆ ಸೇರಿದ್ದು ಎನ್ನುವ ವಿಚಾರವನ್ನು ಈ ದಿನವೇ ನನ್ನ

ಪಾಟೀ ಸವಾಲಿನಲ್ಲಿ ಪ್ರಥಮ ಬಾರಿ ತಿಳಿಸುತ್ತಿದ್ದು ನಾನು ಸದರಿ ವಿಚಾರವನ್ನು ಹಿಂದೆ ಅಸಲು ದಾವೆ ಸಂಖ್ಯೆ 19/2021ರ ಪ್ರತಿವಾದ ಪತ್ರ ಅಥವಾ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಡಿಕ್ರಿದಾರರಿಗೆ ಸದರಿ ತೆಂಗಿನ ಮರ ಇರುವ ಜಾಗ ಸೇರಿಯೇ ಡಿಕ್ರಿಯಾಗಿದ್ದರೂ ಸಹ ಸದರಿ ನಿ.ಡಿ.-1 ರಲ್ಲಿ ಕಾಣಿಸುವ ಮುಂದುಗಡೆ ಇರುವ ತೆಂಗಿನ ಮರ ಇರುವ ಜಾಗ ನನಗೆ ಸೇರಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 19/2021 ರಲ್ಲಿ ಡಿಕ್ರಿಯಾಗಿ ನಂತರ ಅದರ ಮೇಲೆ ಸಲ್ಲಿಸಿರುವ ಮೇಲ್ಮನವಿ ವಜಾ ಆದ ನಂತರ ನಾನು ಡಿಕ್ರಿದಾರರ ಸ್ವಾಧೀನಕ್ಕೆ ತೊಂದರೆ ಕೊಟ್ಟ ಸಂಬಂಧ ಡಿಕ್ರಿದಾರರು ನನ್ನ ವಿರುದ್ಧ ದೂರನ್ನು ನೀಡಿರುತ್ತಾರೆಂದರೆ ಸರಿಯಲ್ಲ. ಡಿಕ್ರಿದಾರರು ಆ ರೀತಿ ದೂರನ್ನು ನೀಡಿದ ನಂತರ ಪೋಲೀಸರು ನನ್ನನ್ನು ಕರೆಯಿಸಿದ್ದು ನಾನು ಡಿಕ್ರಿದಾರರ ಸ್ವಾಧೀನಕ್ಕೆ ತೊಂದರೆ ಕೊಡುವುದಿಲ್ಲವೆಂದು ಮುಚ್ಚಳಿಕೆ ಬರೆದುಕೊಟ್ಟಿರುತ್ತೇನೆಂದರೆ ಸರಿಯಲ್ಲ. ಡಿಕ್ರಿದಾರರ ಮನೆಯ ಪೂರ್ವಕ್ಕೆ ಇರುವ ಡಿಕ್ರಿದಾರರು ಬಿಟ್ಟಿರುವ ಖಾಲಿ ಜಾಗ ಹಾಗು ಅವರಿಗೆ ಸೇರಿದ ತೆಂಗಿನ ಮರವನ್ನು ಕಬಳಿಸುವ ಉದ್ದೇಶದಿಂದ ನಾನು ಡಿಕ್ರಿದಾರರಿಗೆ ತೊಂದರೆ ಕೊಡುತ್ತಿದ್ದೇನೆಂದರೆ ಸರಿಯಲ್ಲ. ನಾನು 2021ನೇ ಇಸವಿಯಲ್ಲಿ ಸರ್ವೆ ಹದ್ದುಬಸ್ತ್ ಕಾರ್ಯ ನಡೆಸಿದಾಗ ಸರ್ವೆಯನ್ನು ಅವರು ನನ್ನ ಜಾಗಕ್ಕೆ ಹದ್ದುಬಸ್ತ್ ಗುರುತಿಸಿ ಕಲ್ಲನ್ನು ನೆಟ್ಟಿದ್ದು, ಸದರಿ ಕಲ್ಲನ್ನು ನಾನು ಕಿತ್ತು ಹಾಕಿರುತ್ತೇನೆಂದರೆ ಸರಿಯಲ್ಲ. ನಾನು ಡಿಕ್ರಿದಾರರಿಗೆ ಆದ ಡಿಕ್ರಿ ಆದೇಶವನ್ನು ಉಲ್ಲಂಘಿಸಿ ಅವರಿಗೆ ತೊಂದರೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**